ಕ್ರೀಡಾಂಗಣ ನಿರ್ಮಾಣ

663 (1075) ಶ್ರೀ ನರೇಂದ್ರ ಆರ್ (ಹನೂರು) : ಮಾನ್ಯ ಜವಳಿ, ಯುವಜನ ಸೇವಾ ಮತ್ತು ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳ್ಳೇಗಾಲದ ಹನೂರು ಕ್ಷೇತ್ರದಲ್ಲಿರುವ ಕ್ರೀಡಾಂಗಣವನ್ನು ಮೂಲಭೂತ ಸೌಲಭ್ಯಗಳ ಕೊರತೆಯಿಂದಾಗಿ ಕ್ರೀಡಾಪಟುಗಳು ಉಪಯೋಗಿಸದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೆ;

ಆ) ಬಂದಿದ್ದಲ್ಲಿ, ಕ್ರೀಡಾಂಗಣಕ್ಕೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಜವಳಿ, ಯುವಜನ ಸೇವಾ ಮತ್ತು ಕ್ರೀಡಾ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಪಹಣಿ ನೋಂದಾವಣಿ

665 (1220) ಶ್ರೀ ನರೇಂದ್ರ ಆರ್. (ಹನೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು, ಮಾರ್ಟಳ್ಳಿ ಗ್ರಾಮದಲ್ಲಿನ ಸರ್ವೆ ನಂ.1 ರಿಂದ 100ರ ತನಕ ಇರುವ ಜಮೀನುಗಳ ಪಹಣಿ ನೋಂದಾವಣಿಯನ್ನು ಕೈಬರಹದ ಪಹಣಿಯಿಂದ (RTC) ಗಣಕೀಕೃತ ಮಾಡುವಾಗ ಇಲಾಖೆಯವರು ಕೈಬಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ;

ಆ) ಬಂದಿದ್ದಲ್ಲಿ, ಸರಿಪಡಿಸಲು ತೆಗೆದುಕೊಂಡ ಕ್ರಮಗಳೇನು?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಹೌದು.

ಮಾರ್ಟಳ್ಳಿ ಗ್ರಾಮದ ಸರ್ವೆ ನಂಬರ್‌ಗಳನ್ನು ಅಕಾರಬಂದ್ ಪ್ರಕಾರ ಮೂರು ಬಿಟ್‌ಗಳಾಗಿ ವಿಂಗಡಿಸಲಾಗಿದ್ದು, ಬಿಟ್ ನಂ.I ರಲ್ಲಿ ಸರ್ವೆ ನಂಬರ್ 1 ರಿಂದ 552 ಇರುತ್ತದೆ, ಬಿಟ್ ನಂ.II ರಲ್ಲಿ ಸರ್ವೆನಂಬರ್ 1 ರಿಂದ 74

ಹಾಗೂ ಬಿಟ್ ನಂ. III ರಲ್ಲಿ ಸರ್ವೆ ನಂಬರ್ 1 ರಿಂದ 10 ಇದ್ದಾಗ, ಪಹಣಿ ಗಣಕೀಕರಿಸುವಾಗ ಮಾರ್ಟಳ್ಳಿ ಗ್ರಾಮವನ್ನು ಒಂದೇ ಗ್ರಾಮವೆಂದು ಪರಿಗಣಿಸಿ ಪಹಣಿ ಗಣಕೀಕರಿಸಲಾಗಿದ್ದು, ಡಾಟಾ ಮಿಕ್ಸ್ ಆದ ಕಾರಣ ಕೆಲವು ಪಹಣಿಗಳು ಡೇಟಾಬೇಸ್‌ನಲ್ಲಿ ದಾಖಲಾಗಿಲ್ಲ. ಈ ಸಮಸ್ಯೆಯನ್ನು ನಂತರ ಸರಿಪಡಿಸಲಾಗಿದ್ದು ಮಾರ್ಟಳ್ಳಿಯನ್ನು ಮೂರು ಗ್ರಾಮಗಳನ್ನಾಗಿ ವಿಂಗಡಿಸಿ ಪಹಣಿ ಗಣಕೀಕರಿಲಾಗಿರುತ್ತದೆ. ಈ ಕಾರಣಗಳಿಂದಾಗಿ ಕೆಲವು ಸರ್ವೆ ನಂಬರ್‌ನ ಪಹಣಿಗಳು ಗಣಕೀಕರಣವಾಗದೆ ಕೈಬಿಟ್ಟಿರುತ್ತದೆ.

ಆ) ಮೇಲ್ಕಂಡ ದೋಷವನ್ನು ಸರಿಪಡಿಸಿ ಪಹಣಿಗಳ ಗಣಕೀಕರಣ ಪ್ರಗತಿಹಂತದಲ್ಲಿ ಇರುತ್ತದೆ.

ಬಿಜಾಪುರ ಜಿಲ್ಲೆಯಲ್ಲಿ ಅತಿವೃಷ್ಟಿ ಹಾನಿ

671 (273) ಶ್ರೀ ಪಾಟೀಲ್ ಎ.ಎಸ್ (ನಡಹಳ್ಳಿ) (ದೇವರಹಿಪ್ಪರಗಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯಲ್ಲಿ ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ ಬಿದ್ದ ಮಳೆ ಪ್ರವಾಹದಿಂದಾಗಿ ಸಂತ್ರಸ್ಥರಾದವರಿಗೆ ಜಿಲ್ಲಾಡಳಿತ ಯಾವ ಯಾವ ಕ್ರಮಕ್ಕೆಗೊಂಡಿದೆ. (ಇಲಾಖಾವಾರು ವಿವರ ನೀಡುವುದು);

ಆ) ಯಾವ ಯಾವ ವಿಧಾನಸಭಾ ಕ್ಷೇತ್ರಕ್ಕೆ ಯಾವ ಇಲಾಖೆಯಿಂದ ಪರಿಹಾರ ನೀಡಲಾಗಿದೆ; (ಪರಿಹಾರದ ಕಾಮಗಾರಿಗಳ ಹೆಸರು ಅನುದಾನದ ಬಗ್ಗೆ ಸಂಪೂರ್ಣ ವಿವರ ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು);

ಇ) ರಾಜ್ಯ ಸರ್ಕಾರದಿಂದ, ಸಂಘ ಸಂಸ್ಥೆಗಳಿಂದ, ಸರ್ಕಾರಿ ಸ್ವಾಮ್ಯದ ನಿಗಮ, ಮಂಡಳಿಗಳಿಂದ ಖಾಸಗಿ ವ್ಯಕ್ತಿ ಸಂಘ ಸಂಸ್ಥೆಗಳಿಂದ ಬಿಜಾಪುರ ಜಿಲ್ಲೆಯ ನೆರೆ ಸಂತ್ರಸ್ಥರಿಗೆ ಎಷ್ಟು ಧಾನ್ಯ, ಪಾತ್ರೆ, ಬಟ್ಟೆ ಹಣ ಇತ್ಯಾದಿ ಸಾಮಗ್ರಿಗಳು ಬಂದಿರುತ್ತದೆ; ಸದರಿ ಸಾಮಗ್ರಿಗಳು ಬಂದಿರುತ್ತವೆ. ಸದರಿ ಸಾಮಗ್ರಿಗಳು ಸಂತ್ರಸ್ಥರಿಗೆ ವಿತರಿಸಲಾಗಿದೆಯೇ?

ಈ) ವಿತರಿಸಿದಲ್ಲಿ ಗ್ರಾಮವಾರು ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು;

ಉ) ಪರಿಹಾರ ವಿತರಣೆಯನ್ನು ಯಾವ ಗ್ರಾಮಕ್ಕೆ ಯಾರಿಂದ ಸಾಮಗ್ರಿಗಳನ್ನು ನೀಡಲಾಗಿದೆ. (ಪ್ರತ್ಯೇಕ ವಿವರ ಒದಗಿಸುವುದು);